**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 137/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ **ಪ್ರಭಾವತಿ** | | ಪ್ರಮಾಣ ಮಾಡಿದ ದಿನಾಂಕಃ |
| ಗಂಡನ ಹೆಸರು | ಃ **ಮೋಹನಕುಮಾರ** | | **12.10.2021** |
| ವಯಸ್ಸು | ಃ **66** ವರ್ಷ | | |
| ವೃತ್ತಿ | ಃ **ಗೃಹಿಣಿ** | | **ಪಿಡಬ್ಲ್ಯೂ ಃ 02** |
| ವಾಸ ಸ್ಥಳ | ಃ **ಚಾಮರಾಜಪುರಂ, ಮೈಸೂರು** | | **ಸಿಡಬ್ಲ್ಯೂ ಃ 01** |

***ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ***

**ನ್ಯಾಯಾಲಯದೆದುರು ಹಾಜರಿರುವ ಆರೋಪಿಯನ್ನು ನೋಡಿರುತ್ತೇನೆ. ಆರೋಪಿ ಚಿಕ್ಕ ಹುಡುಗನಾಗಿದ್ದಾಗಿನಿಂದ ಪರಿಚಯ ಇದೆ. ಆರೋಪಿ ತಳ್ಳುವ ಗಾಡಿಯಲ್ಲಿ ಹಣ್ಣಿನ ವ್ಯಾಪಾರ ಮಾಡಿಕೊಂಡಿರುತ್ತಾನೆ. ಆರೋಪಿ ತನ್ನ ಹಣ್ಣಿನ ಗಾಡಿಯನ್ನು ನಮ್ಮ ಮನೆಯ ಪಕ್ಕದ ಖಾಲಿ ಜಾಗದಲ್ಲಿ ಇಡುತ್ತಿದ್ದ. ಆದ್ದರಿಂದ ಆತನನ್ನು ನೋಡಿರುತ್ತೇನೆ. ಸಾಮಾನ್ಯವಾಗಿ ಬೆಳಿಗ್ಗೆ 8 ಗಂಟೆಗೆ ಗಾಡಿಯನ್ನು ತೆಗೆದುಕೊಂಡು ಹೋಗಿ ಪುನಃ ರಾತ್ರಿ 8 ಗಂಟೆಗೆ ಅಲ್ಲಿಗೆ ತಂದು ಬಿಡುತ್ತಿದ್ದ.**

**2. ನನ್ನ ತಾಯಿಯ ಹೆಸರು ನಾಗರತ್ನ. ಮೋಹನಕುಮಾರ ನನ್ನ ಗಂಡ. ಇಂದಿಗೆ 2 ವರ್ಷದ ಹಿಂದೆ ನಾನು, ನನ್ನ ತಾಯಿ ಮತ್ತು ನನ್ನ ಗಂಡ ಜೊತೆಯಲ್ಲಿ ವಾಸ ಮಾಡುತ್ತಿದ್ದೆವು. ನನ್ನ ತಾಯಿಗೆ ಸುಮಾರು 83 ವರ್ಷ ವಯಸ್ಸಾಗಿತ್ತು. ದಿನಾಂಕ 21.08.2019ರಂದು ನಾನು ಬೆಳಿಗ್ಗೆ 7 ಗಂಟೆಗೆ ವಾಯುವಿಹಾರಕ್ಕೆ ಹೋಗಿದ್ದೆ. ಸುಮಾರು 8ಃ15ಕ್ಕೆ ಮನೆಗೆ ಬಂದಾಗ ನನ್ನ ಗಂಡ ಮತ್ತು ತಾಯಿ ಮನೆಯಲ್ಲಿದ್ದು, ನನ್ನ ತಾಯಿ ಬಾಗಿಲನ್ನು ತೆರೆದು ತಾನು ಹಲ್ಲುಜ್ಜುತ್ತಿದ್ದಾಗ ಯಾರೋ ಒಬ್ಬ ವ್ಯಕ್ತಿ ತಲೆಗೆ ಹೆಲ್ಮೇಟ್ ಹಾಕಿಕೊಂಡು ತನ್ನ ಬಾಯಿಗೆ ಬಟ್ಟೆಯನ್ನು ತುರುಕಿ ಹೆದರಿಸಿ ಅವರ ಕೈಯಲ್ಲಿದ್ದ 7 ಚಿನ್ನದ ಬಳೆಗಳನ್ನು ಕಿತ್ತುಕೊಂಡು ಹೋಗಿರುತ್ತಾನೆ ಎಂದು ತಿಳಿಸಿದರು. ನನ್ನ ಗಂಡನ ಕಣ್ಣಿಗೆ ಶಸ್ತ್ರ ಚಿಕಿತ್ಸೆಯಾಗಿದ್ದು ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಿದ್ದರು. ನನ್ನ ತಾಯಿಯ ಸೊಂಟದ ಮೂಳೆಗೆ ಶಸ್ತ್ರ ಚಿಕಿತ್ಸೆ ಆಗಿತ್ತು.**

3. ನನ್ನ ತಾಯಿ ಮಾಮೂಲಿಯಾಗಿಯೇ ಇದ್ದರು. ನಾನು ಪೊಲೀಸ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ಆಗ ಸುಮಾರು 8:30/9 ಗಂಟೆ ಆಗಿತ್ತು. ಠಾಣೆಗೆ ನನ್ನ ತಾಯಿ ಬಂದಿರಲಿಲ್ಲ. ನಾನು ದೂರು ಕೊಡುವ ಮೊದಲು ನನ್ನ ತಮ್ಮ ಕೂಡ ಪೊಲೀಸರಿಗೆ ದೂರು ಕೊಟ್ಟಿದ್ದ, ಅವರು ದೂರನ್ನು ಲಿಖಿತವಾಗಿ ಕೊಟ್ಟಿದ್ದರೆ ಎಂಬ ಬಗ್ಗೆ ಗೊತ್ತಿಲ್ಲ. ಪೊಲೀಸರು ನಾನು ದೂರು ಕೊಟ್ಟ ನಂತರ ಮನೆಗೆ ಬಂದಿರುತ್ತಾರೆ. ದೂರಿನಲ್ಲಿ ಸಾಕ್ಷಿ ರುಜು ಗುರುತಿಸಿದ್ದು, ದೂರು ನಿಪಿ-4 ಎಂದು, ಸಾಕ್ಷಿ ರುಜುವನ್ನು ನಿಪಿ-4(ಎ) ಎಂದು ಗುರುತಿಸಿದೆ.

4. ಪೊಲೀಸರು ದೂರು ಕೊಟ್ಟ ಅರ್ಧ ಗಂಟೆಯಲ್ಲಿ ಮನೆಗೆ ಬಂದು ಮಹಜರ ಬರೆದಿದ್ದಾರೆ. ಪೊಲೀಸರು ಮನೆಯಲ್ಲಿ ಪರಿಶೀಲನೆ ಮಾಡಿ ಹೊರಟು ಹೋದರು. ನಂತರ ಸುಮಾರು 10/11 ಗಂಟೆಗೆ ಬಂದು ಮಹಜರ ಬರೆದಿರುತ್ತಾರೆ. ಈಗ ತೋರಿಸಿದ ಮಹಜರ ಮೇಲೆ ಇರುವ ರುಜು ನನ್ನದೆ ಇರುತ್ತದೆ. ಮಹಜರನ್ನು ನಿಪಿ-5 ಅಂತ ಹಾಗೂ ನನ್ನ ರುಜುವನ್ನು ನಿಪಿ-5(ಎ) ಅಂತ ಗುರುತಿಸಲಾಯಿತು. ಮಹಜರಗೆ ನಾನು ಒಬ್ಬಳೇ ರುಜು ಮಾಡಿದ್ದೇನೆ. ಬೇರೆ ಯಾರೂ ರುಜು ಮಾಡಿಲ್ಲ. ಮನೆಯ ಬಾತರೂಂನಲ್ಲಿ ನನ್ನ ತಾಯಿಯ ಬಾಯಿಗೆ ಇಟ್ಟಿದ್ದ ಬಟ್ಟೆ ಇತ್ತು. ಅದನ್ನು ಪೊಲೀಸರು ತೆಗೆದುಕೊಂಡಿದ್ದರು. ಆ ಬಟ್ಟೆ ಒಂದು ಅಂಡರವೀಯರ್ ಆಗಿತ್ತು. ಅದನ್ನು ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಒಂದು ಸೀಲ್ ಮಾಡಿದ ಕವರನ್ನು ತೆರೆದು ಅದರಲ್ಲಿದ್ದ ಬಟ್ಟೆಯನ್ನು ತೋರಿಸಲಾಗಿ ಅದು ಅಮಾನತ್ತುಪಡಿಸಿಕೊಂಡ ಅಂಡರವೀಯರ್ ಎಂದು ಸಾಕ್ಷಿ ಗುರುತಿಸಿದ್ದು ಅದನ್ನು ಮು.ಮಾ-1 ಎಂದು ಗುರುತಿಸಿದೆ).

5. ನನ್ನ ತಾಯಿಯ ಬಳಿ ಇದ್ದ ಬಳೆಗಳನ್ನು ನನ್ನ ತಂಗಿ ತನ್ನ ಹೆಸರಿನಲ್ಲಿ ಖರೀದಿ ಮಾಡಿದ್ದರು. ಒಂದು ಬಾರಿ 4 ಬಳೆಗಳನ್ನು ಇನ್ನೊಂದು ಬಾರಿ 3 ಬಳೆಗಳನ್ನು ನನ್ನ ತಾಯಿಗೆ ಕೊಟ್ಟಿದ್ದಳು. ಪ್ರಿಯಾಂಕ ನನ್ನ ಮಗಳು ಇರುತ್ತಾಳೆ. ಆಕೆ ನನ್ನ ತಾಯಿಗೆ ಬಳೆಗಳನ್ನು ಕೊಟ್ಟಿರಲಿಲ್ಲ. ಅದೇ ದಿನ ಆರೋಪಿಯೇ ನಮ್ಮ ಮನೆಗೆ ಬಂದು ನಮ್ಮ ತಾಯಿಯ ಬಳಿ ಇದ್ದ ಬಳೆಗಳನ್ನು ದರೋಡೆ ಮಾಡಿರುವುದಾಗಿ ನಮ್ಮ ಮನೆಯ ಪಕ್ಕದ ಓಂಕಾರ ಮೋಟಾರ್ಸನ

ಸಿಸಿಟಿವಿಯಲ್ಲಿ ದಾಖಲಾಗಿದ್ದು ಅದನ್ನು ನಾವು ನೋಡಿ ಆರೋಪಿಯೇ ದರೋಡೆ ಮಾಡಿರುವುದಾಗಿ ಆತನ ನಡುಗೆಯ ಮಾದರಿ, ಬಟ್ಟೆ ಇವುಗಳ ಆಧಾರದ ಮೇಲೆ ಆರೋಪಿಯನ್ನು ಗುರುತಿಸಿರುತ್ತೇವೆ. ಅದೇ ದಿನ ಪೊಲೀಸರು ಆರೋಪಿ ಕಡೆಯಿಂದ ಬಳೆಗಳನ್ನು ವಶಪಡಿಸಿಕೊಂಡಿರುವುದಾಗಿ ತಿಳಿಸಿದ್ದು, ಠಾಣೆಗೆ ಹೋಗಿರುತ್ತೇನೆ. ಠಾಣೆಯಲ್ಲಿ ನಮ್ಮ ತಾಯಿಯ ಬಳೆಗಳು ಇದ್ದವು. ಆರೋಪಿ ಕೂಡ ಠಾಣೆಯಲ್ಲಿದ್ದ. ನಂತರ ಬಳೆಗಳನ್ನು ನಮ್ಮ ವಶಕ್ಕೆ ಪಡೆದುಕೊಂಡಿರುತ್ತೇವೆ.

6. ಈಗ ಬಳೆಗಳು ನನ್ನ ಮನೆಯಲ್ಲಿರುತ್ತವೆ. ಅವುಗಳ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸಿದ ಎರಡು ಫೋಟೋಗಳಲ್ಲಿ ಇರುವ ಬಳೆಗಳನ್ನು ಸಾಕ್ಷಿ ಗುರುತಿಸಿದ್ದು, ಆ ಫೋಟೋಗಳನ್ನು ತಕರಾರಿಗೆ ಒಳಪಟ್ಟು ನಿಪಿ-6 ಮತ್ತು 7 ಎಂದು ಗುರುತಿಸಿದೆ. ಈಗ ನೋಡಿದ ಫೋಟೋದಲ್ಲಿ ಕಾಣುವ ಹಂಚಿನ ಮನೆ ನನ್ನ ಮನೆ ಆಗಿರುತ್ತದೆ. ಈ ಫೋಟೋ ನಿಪಿ-8 ಎಂದು ಗುರುತಿಸಿದೆ. ಈಗ ತೋರಿಸಿದ ಫೋಟೋದಲ್ಲಿ ನನ್ನ ತಾಯಿ ನಮ್ಮ ಮನೆಯ ಬಾತರೂಂನ್ನು (ಕೃತ್ಯ ನಡೆದ ಸ್ಥಳ) ತೋರಿಸುತ್ತಿದ್ದಾರೆ. ಈ ಫೋಟೋ ನಿಪಿ-9 ಎಂದು ಗುರುತಿಸಿದೆ. ಕೃತ್ಯ ನಡೆದ ಎರಡು ದಿನಗಳ ನಂತರ ನನ್ನ ತಾಯಿಗೆ ಎದೆ ನೋವು ಕಾಣಿಸಿಕೊಂಡಿತ್ತು. ಕೃತ್ಯದ ಘಟನೆಯ ಹಿನ್ನೆಲೆಯಲ್ಲಿ ಅವರು ಹೃದಯಾಘಾತಕ್ಕೆ ಒಳಗಾಗಿದ್ದರು. ನಂತರ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಅಲ್ಲಿ ಅವರು ಮೃತಪಟ್ಟಿರುತ್ತಾರೆ.

7. ನನ್ನ ತಾಯಿ ಮೃತಪಟ್ಟ ನಂತರ ಪೊಲೀಸರಿಗೆ ಮಾಹಿತಿಯನ್ನು ದಿನಾಂಕ 24ರಂದು ಕೊಟ್ಟಿರುತ್ತೇನೆ. ಇದನ್ನು ನಿಪಿ-10 ಎಂದು ಸಾಕ್ಷಿ ರುಜುವನ್ನು ನಿಪಿ-10(ಎ) ಎಂದು ಗುರುತಿಸಿದೆ. ಘಟನೆ ನಂತರ ಒಂದು ದಿನ ನನ್ನ ತಾಯಿ ಮಾಮೂಲಿಯಾಗಿ ಮಾತನಾಡಿಕೊಂಡು ಇದ್ದರು. ಎರಡನೇಯ ದಿನ ಸ್ವಲ್ಪ ಸಮಸ್ಯೆಯಾಗಿತ್ತು. ನಮ್ಮ ಮನೆಗೆ ಎರಡು ಕಡೆಯಲ್ಲಿ ಮುಖ್ಯ ಬಾಗಿಲುಗಳು ಇರುತ್ತವೆ. ಒಂದು ಬಾಗಿಲು ರಸ್ತೆ/ಗ್ಯಾರೆಜ್ ಕಡೆಗೆ, ಇನ್ನೊಂದು ಬಾಗಿಲು ಹಿಂಭಾಗದ ಕಡೆ ಇರುತ್ತದೆ. ಆರೋಪಿ ನಮ್ಮ ಮನೆಗೆ ಗ್ಯಾರೇಜ್ ಕಡೆಯ ಬಾಗಿಲಿನಿಂದ ಬಂದಿರುತ್ತಾನೆ.

**(ಈ ಹಂತದಲ್ಲಿ ಮುಂದಿನ ಮುಖ್ಯ ವಿಚಾರಣೆ ಮಾಡಲು ಸರ್ಕಾರಿ ಅಭಿಯೋಜಕರು ಸಮಯ ಕೇಳಿದ್ದರಿಂದ ಸಮಯ ನೀಡಲಾಯಿತು).**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**12.10.2021.**
**(ಎಂ.ಎಲ್. ರಘುನಾಥ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**